Mr. SPEAKER.—So, fishing information for the purpose of further questioning. The Hon'ble Member wants to know the time of completion and then charge the Government that there has been delay and so on. Next question.

---

## General Body Meeting of Sathnur Service Co-operative Society

*Q.—455 Sri K. L. SHIVALINGE GOWDA (Virupakshipura).—

Will the Government be pleased to state :—

(*a*) since when the general body meeting of Sathnur Service Co-operative Society, Sathnur Hobli, Kanakapura Taluk, has not been convened;

(*b*) the reasons for the same ?

A.—Sri KONDAJJI BASAPPA (Deputy Minister for Co-operation).—

(*a*) The general body meeting of the Society is not due yet, the last general body meeting having been convened on 28-2-1965.

(*b*) Does not arise in view of reply to clause (*a*) above.

ಶ್ರೀ ಕೊಂಡಜ್ಜಿ ಬಸಪ್ಪ.—ಉತ್ತರದಲ್ಲಿ ಸ್ವಲ್ಪ ಬದಲಾವಣೆ ಮಾಡಬೇಕಾಗಿದೆ. (ಅ) ಉತ್ತರದಲ್ಲಿ ಕಳೆದ ಸರ್ವಸದಸ್ಯರ ಸಭೆಗೆ ಬದಲಾಗಿ 1962-63 ಮತ್ತು 1963-64ನೇ ಸರ್ವಸದಸ್ಯರ ಸಭೆ ಎಂಬುದಾಗಿ ತಿದ್ದಿಕೊಳ್ಳಬೇಕು.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಈ ಸಭೆ ನಡೆಸಿದಾಗ ಸಂಘದ ಅಧ್ಯಕ್ಷರು ಹಾಜರಿ ಇದ್ದರೂ ಬೇರೆಯವರು ಅಧ್ಯಕ್ಷತೆ ವಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಅದು ಕ್ರಮ ಬದ್ಧವೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಅದು ಸರ್ಕಾರದ ಗಮನಕ್ಕೆ ಬಂದಿದೆ. ಅಧ್ಯಕ್ಷರೇನಾದರೂ ಗೈರುಹಾಜರಿಯಾಗಿದ್ದರೆ ಅವರ ಜಾಗದಲ್ಲಿ ಇಂತಹವರನ್ನು ಚುನಾವಣೆ ಮಾಡಿದ್ದಾರೆಂಬುದೇ ಅಲ್ಲಿ ಅನುಮಾನಾನ್ಪದವಾಗಿದೆ. ಆದರೆ ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರು ಇದು ಬೈಲಾಗಳಿಗೆ ಅನುಸರಿಸಿ ಆಗಿಲ್ಲ ಅದ್ದರಿಂದ ಈ ವಿಚಾರವನ್ನು ಶಿಫಾರಸು ಮಾಡುವುದಕ್ಕಾಗುವುದಿಲ್ಲ ಎಂಬುದ ಗಿ ಅವರು ಒಂದು ವರದಿಯನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಸಂಘದ ಸದಸ್ಯರ ಪೈಕಿ ಕೆಲವರು ಡಿಫಾಲ್ಟರ್ಸ್ ಆಗಿದ್ದರೂ ಅವರು ಸಂಘದ ಡೈರೆಕ್ಟರುಗಳಾಗಿ ಚುನಾವಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದೂ ಕೂಡ ಬಂದಿದೆ. ಕೆಲವರು ಡಿಫಾಲ್ಟರ್ಸ್ ಇದ್ದಾರೆಂದು ವರದಿ ಸಹ ಬಂದಿದೆ.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಈ ಸಂಘದ ಕಾರ್ಯದರ್ಶಿಗಳಿಂದ ಹಣ ದುರುಪಯೋಗ ವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಸುಮಾರು ರೂ. 2275-81 ಪೈಸಾಗಳಷ್ಟು ಹಣ ಆ ಸಂಘದ ಗೌರವಕಾರ್ಯದರ್ಶಿಗಳಿಂದ ದುರುಪಯೋಗವಾಗಿದೆಯೆಂದು ವರದಿಬಂದಿದೆ. ಅವರ ಮೇಲೆ ಕ್ರಿಮಿನರ್ ಕಂಪ್ಲೇಂಟನ್ನು ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರು ರಾಡ್ಜ್ ಮಾಡಿದ್ದಾರೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಸಂಘದ ಅಧ್ಯಕ್ಷರು ಜನರಲ್ ಬಾಡಿಮೀಟಿಂಗ್‌ನಲ್ಲಿ ಅಧ್ಯಕ್ಷತೆ ವಹಿಸದೇ ಇದ್ದಾಗ ಸದಸ್ಯರ ಪೈಕಿ ಬೇರೆ ಯಾರಾದರೂ ಅಧ್ಯಕ್ಷತೆ ವಹಿಸಬಹುದು ಎಂಬುದಾಗಿ ಏನಿ ಸರ್ಕಾರದವರು ಆದೇಶವನ್ನು ಹೊರಡಿಸಬಾರದು ?

ಶ್ರೀ ಕೊಂಡಜ್ಜಿ ಬಸಪ್ಪ.—ಆ ರೀತಿ ಮಾಡುವುದಕ್ಕಾಗುವುದಿಲ್ಲ. ಸಂಘದ ಅಧ್ಯಕ್ಷ ಕಾನೂನು ಪ್ರಕಾರ ಪ್ರಿಸೈಟ್ ಮಾಡಬೇಕಾಗುತ್ತದೆ. ಅವರ ಗೈರುಹಾಜರಿಯಲ್ಲಿ ಸದಸ್ಯರಲ್ಲದವರು ಮಾನ್ಯ ಸದಸ್ಯದಲ್ಲಿ ಯಾರಾದರೂ ಪ್ರಿಸೈಡ್ ಮಾಡಬಹುದು. ಬೇರೆ ಯಾರೋ ಬಂದು ಪ್ರಿಸೈಡ್ ಮಾಡಿದರೆ ಮೊಟಿಂಗಿನ ಎಲ್ಲಾ ಪ್ರೊಸೀಡಿಂಗ್ಸ್ ಇಲ್ಲಗರ್ ಆಗುತ್ತದೆ.

Mr. SPEAKER.—He suggested amendments in the rules is it not desiable that some one else presides? What do the Government consider?

Sri KONDAJJI BASAPPA.—It is not desirable Sir

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಇವರು ಕಾರ್ಯಕಾರಿ ಸಮಿತಿಯ ಸದಸ್ಯರೊಬ್ಬರ ಅಣ್ಣಂದಿರ ಮಕ್ಕಳೆಂಬುದಾಗಿ ಅವರ ಮೇಲೆ ಸರ್ಕಾರದವರು ಯಾವಕ್ರಮವನ್ನು ತೆಗೆದುಕೊಳ್ಳಬಾರದೆಂದು ಅಭಿಪ್ರಾಯವೇ?

ಶ್ರೀ ಕೊಂಡಜ್ಜಿ ಬಸಪ್ಪ.—ಅದು ನನಗೆ ಗೊತ್ತಿಲ್ಲ.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಇಂತಹ ಸೇವಾ ಸಹಕಾರ ಸಂಘಗಳಲ್ಲಿ ಗೌರವ ಕಾರ್ಯದರ್ಶಿಗಳ ಬದಲು ಒಬ್ಬ ಖಾಯಂ ಸೆಕ್ರೆಟರಿಯನ್ನು ನೇಮಿಸುವ ಬಗ್ಗೆ ತಕ್ಕಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆಯೇ?

ಶ್ರೀ ಕೊಂಡಜ್ಜಿ ಬಸಪ್ಪ.—ಎಲ್ಲೆಲ್ಲ ಇಂತಹ ಸೇವಾಸಹಕಾರ ಸಂಘಗಳಿವೆಯೋ ಅಲ್ಲೆಲ್ಲಾ ಖಾಯಂ ಸೆಕ್ರೆಟರಿಗಳನ್ನು ನೇಮಿಸಬೇಕೆಂದು ಅನುಮತಿ ಕೊಟ್ಟಿದ್ದೇವೆ. ಕೆಲವು ಕಡೆಗಳಲ್ಲಿ ಇರಾಖೆಯ ಅಧಿಕಾರಿಗಳನ್ನು ಕೂಡ ಕೊಡುತ್ತಿದ್ದೇವೆ.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಉತ್ತರದಲ್ಲಿ 2 ಸಾವಿರ ಚಿಲ್ಲರೆ ಹಣ ದುರುಪಯೋಗವಾಗಿದೆ ಎಂಬುದಾಗಿ ಹೇಳಿದ್ದೀರಿ. ಅದು ಯಾವವರ್ಷದಲ್ಲಿ ದುರುಪಯೋಗವಾಗಿದೆ? ಈಗ ಆ ಸೊಸೈಟಿ ಚೆನ್ನಾಗಿ ಕೆಲಸ ಮಾಡುತ್ತಿದೆಯೇ?

ಶ್ರೀ ಕೊಂಡಜ್ಜಿ ಬಸಪ್ಪ.—ಈ ಪ್ರೊಸೀಡಿಂಗ್ಸ್ ನೋಡಿದರೆ ಅದು ಅಷ್ಟು ಚೆನ್ನಾಗಿ ಕೆಲಸ ಮಾಡುತ್ತಿದೆ ಎಂಬ ನಂಬಿಕೆ ಬರುವುದಿಲ್ಲ. ಆದ್ದರಿಂದ ನಮ್ಮ ಇರಾಖೆಯವರು ಮ್ಯಾನೇಜ್ ಮೆಂಟಿನವರಿಗೆ ಷೋಕಾಸ್ ನೋಟೀಸ್ ಕೊಟ್ಟು ಅಕ್ಟನ 30 ನೇ ಸೆಕ್ಷನ್ ಪ್ರಕಾರ ಅದನ್ನು ಸೂಪರ್‌ಸೀಡ್ ಮಾಡಬೇಕಾದ ಸಂದರ್ಭ ಕಂಡುಬರುತ್ತಾ ಇದೆ.

ಶ್ರೀ ಕೆ.ಎಲ್. ಶಿವಲಿಂಗೇಗೌಡ.—ಈ ಸೊಸೈಟಿಯು ರಿಜಿಸ್ಟ್ರೇಷನ್ ಆಗಿ ಎಷ್ಟು ವರ್ಷ ಆಯಿತು ಎಷ್ಟು ವರ್ಷಗಳಿಂದ ಈ ಸೊಸೈಟಿಯ ಲೆಕ್ಕಗಳು ಆಡಿಟ್ ಆಗಿಲ್ಲ, ಎಷ್ಟು ವರ್ಷಗಳ ಆಡಿಟ್ ಆಗಿದೆ?

ಶ್ರೀ ಕೊಂಡಜ್ಜಿ ಬಸಪ್ಪ.—ಈ ಸೊಸೈಟಿಯ 28-4-1959ರಲ್ಲಿ ರಿಜಿಸ್ಟರಾಗಿದೆ. 63-64ನೇ ಸಾಲಿನಲ್ಲಿ ಈ ಸೊಸೈಟಿಯ ಆಡಿಟ್ ಆಗಿದೆ. 1964-65ನೇ ಸಾಲಿನ ಆಡಿಟ್ ಆಗಿಲ್ಲ.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಈ ಸೊಸೈಟಿಯ ಆಡಿಟ್ ಆಗದೆ ಅದರ ಜನರಲ್‌ಬಾಡಿ ಮೀಟಿಂಗ್ ನಡೆಸುವುದಕ್ಕೆ ಅವಕಾಶ ಇದೆಯೇ?

ಶ್ರೀ ಕೊಂಡಜ್ಜಿ ಬಸಪ್ಪ.—ಆ ಸೊಸೈಟಿಯಲ್ಲಿ ಬೇರೆ ಯಾವ ವಿಧವಾದ ನಡೆವಳಿಕೆಗಳೂ ಇಲ್ಲದೆ ಇದ್ದರೆ ಆಗ ಆ ಸೊಸೈಟಿಯ ಜನರಲ್‌ಬಾಡಿ ಮೀಟಿಂಗ್ ನಡೆಸಬಹುದು.

ಶ್ರೀ ಕೆ. ಎಸ್. ಶಿವಲಿಂಗೇಗೌಡ.—ಷಾರ್ಟ್ ಟರ್ಮ್, ಮೀಡಿಯಂ ಟರ್ಮ್ ಸಾಲಕ್ಕೆ ಸಂಬಂಧಪಟ್ಟ ಹಾಗೆ ಈ ಸೊಸೈಟಿಯವರು ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕಿಗೆ ಕೊಡಬೇಕಾದ ಬಾಕಿ ಎಷ್ಟಿದೆ?

Mr. SPEAKER.—How does it arise out of this question? This is asking for detailed information spreading over a number of years full of statistics? If the information is readily available it may be given. I have no objection.

Sri KONDAJJI BASAPPA.—A sum of Rs. 11,189 is overdue to the District Central Co-operative Bank, Bangalore.